ಕಳೆದುಹೋದೆವು. ಮಾತಾಡಿಕೊಂಡು ಹೇಗೆ ನಿದ್ದೆ ಹೋದೆವ್ರೋ, ಗೊತ್ತಿಲ್ಲ, ನಾಲ್ಕೂವರೆಯ ಸುಮಾರಿಗೆ ಮೊಬೈಲು ರಿಂಗಾಯಿತು. ಪಾ ಕರೆದಿದ್ದ. 'ಮಾ ನಿನ್ನ ಬಗ್ಗೆ ಕೇಳುತಾ ಇದ್ದಾಳೆ, ಸಿದ್ಧ್... ನೋಡಬೇಕು ಅಂತಿದ್ದಾಳೆ. ಎಲ್ಲರೂ ಸಿಗೋಣ ಅಲ್ಲವಾ? ನಿನ್ನ ಹುಡುಗಿಯನ್ನೂ ಕರಕೊಂಡು ಬಾ... ಲೆಟ್ಸ್ ಮೀಟ್ ಎಟ್ ದ್ಯುಮ್ನ ಸ್ಪ್ರಿಂಗ್ಸ್. ನಿನ್ನ ಸ್ಕೂಲಿನ ಹತ್ತಿರವೇ ಇದೆ. ವಿದ್ಯಾನಿಕೇತನದಿಂದ ಒಂದು ಕಿಲೋಮೀಟರ್ ಇರಬಹುದು...' ಅಂತ ಹೇಳಿ ನನ್ನಲ್ಲಿ ಉಮೇದು ಚಿಗಿಯಿಸಿದ. ಈ ಕುರಿತು ತನ್ವಿಯಲ್ಲಿ ಹೇಳುವಾಗ, ಬಲು ಅಳುಕಿನಿಂದಲೇ ಒಪ್ಪಿಕೊಂಡಳು. ನಂತರದ ಒಂದೂವರೆ ತಾಸಿನಲ್ಲಿ, ಪಾ ನಾಲ್ಕಾರು ಸರ್ತಿ ಕರೆದು ಹೋಟೆಲುದಾರಿಯನ್ನು ಮತ್ತೆ ಮತ್ತೆ ತಿಳಿಹೇಳಿದ್ದ,

ತನ್ವಿ ಐದೂವರೆಗೆಲ್ಲ ನನ್ನ ತೋಳುಗಳಿಂದ ತಪ್ಪಿಸಿಕೊಂಡು ರೆಡಿಯಾದಳು. ತೆಳ್ಳನೆ ಬೆಳ್ಳನೆ ಬನಾರಸೀ ಶಿಫಾನುಟ್ಟು ಡ್ರೆಸ್ಸಿಂಗ್ ಕ್ಲಾಸೆಟ್ಟಿನಿಂದ ಹೊರಬರುವಾಗ, ನನ್ನ ಪಾಲಿನ ದೇವತೆಯೇ ತಾನನಿಸಿದಳು. 'ಸಿದ್ಧ್... ಟೆಲ್ಮಿ, ಶುಡ್ ಐ ವೇರ್‌ಎ ಬಿಂದೀ ಲೈಕ್ ಯು ಕನ್ನಡಿಗಾಸ್?' ಎಂದು ಕೈಯಲ್ಲಿ ಬೊಟ್ಟಿಟ್ಟುಕೊಂಡು ಕೇಳಿದಳು. ನಾನೊಂದು ಕ್ಷಣ ಯೋಚಿಸಿ, 'ಇಲ್ಲದಿದ್ದರೂ ಪರವಾಗಿಲ್ಲ... ಬೀ ವಾಟ್ ಯು ಆರ್...' ಅಂತಂದೆ. ಕುಂಕುಮವಿಲ್ಲದ ಸ್ವಾಭಾವಿಕ ಹಣೆಯಲ್ಲುಳಿದಳು. ದಾರಿಯಲ್ಲಿ ಟ್ರಾಫಿಕ್ಕಿರುತ್ತದಾಗಿ ಮುಂಚೆಯೇ ಹೊರಡುವುದೆಂದು ಆರೂವರೆಗೆ ಹೊರಟರೂ, 'ಅಮರಾವತಿ'ಯನ್ನು ಸೇರುವಾಗ ಪಾ ನಿಗದಿಸಿದ್ದ ವೇಳೆಗಿನ್ನೂ ಇಪ್ಪತ್ತು ಮಿನಿಟು ಬಾಕಿಯಿದ್ದವು. ಒಬ್ಬರೊಬ್ಬರ ಮೋರೆ ನೋಡಿಕೊಂಡು ಇದ್ದೆವು. 'ಸಿದ್ಧ್... ವೈ ಆಯುರ್ ನಾಟ್ ಸೇಇಂಗ್ ಎನಿತಿಂಗ್? ಅವರು ಒಪ್ಪದಿದ್ದರೆ ಏನು ಮಾಡೋದು?' ತನ್ವಿ ಮತ್ತೆ ಪ್ರಶ್ನೆಯನ್ನು ಪುನರಾವರ್ತಿಸಿದಳು. 'ತಾನ್, ಅಂಥದ್ದೇನೂ ಆಗಲ್ಲ, ತಾನ್... ಬೀ ಎಟ್ಟೀಸ್... ಹಾಗೇನಾದರೂ ಆದರೆ ಮತ್ತೆ ಪೇಶಾವರಕ್ಕೆ ಹೋಗಿಬಿಡೋಣ...' ಎಂದು ದನಿ ತಗ್ಗಿಸಿ ಪಿಸುವಾಡಿದೆ. 'ನಿಜವಾಗಲೂ?!' ತನ್ವಿ ಕಣ್ಣು ಸೆಳಕಿಕೊಂಡು ನನ್ನತ್ತ ನೋಡಿದಳು.



ಏಳೂವರೆಗೆ ಸರಿಯಾಗಿ ಪಾ—ನೊಡಗೂಡಿ ಮಾ— ಅವನ ಬಗುಲಿಗಾತುಕೊಂಡೇ ನಡೆದುಬಂದಳು. ಮರಾಠಿಶೈಲಿಯಲ್ಲಿ ರೇಶಿಮೆಯುಟ್ಟಿದ್ದಳು. ಕಚ್ಚೆ ಸೀರೆ, ಮೂಗಿನ ಬಲ ಹೊಳ್ಳೆಯಲ್ಲಿ ನತ್ತು, ಹಣೆಯಲ್ಲಿ ಅರ್ಧಚಂದ್ರದ ತಿಲಕ. ಮತ್ತು ಮೋರೆಭರ್ತಿ ಚಂದ್ರಬಿಂಬ! ಈ ಅವತಾರದಲ್ಲಿ ಅರೆಯಿದ್ದುದೊಂದೆಂದರೆ ಉದ್ದನೆ ಮುಡಿ ಮತ್ತು ಹೂವಿನ ದಂಡೆ. ಪರಮಾಶ್ಚರ್ಯದಿಂದ ಅವಳನ್ನೇ ನೋಡಿಕೊಂಡುಳಿದೆ. ಬೆಳಿಗ್ಗೆ ನೋಡಿದ ಅವಳಿಗೂ, ಈಗ ಎದುರಾದವಳಿಗೂ ಎಷ್ಟು ವ್ಯತ್ಯಾಸವೆನ್ನಿಸಿತು. ಈ ಇಬ್ಬರಲ್ಲಿ ಯಾರು ಸರಿ, ಯಾರು ತಪ್ಪು? ಯಾವುದು ನಿಜ, ಯಾವುದು ಸುಳ್ಳು? ಸುಮಾರು ಪ್ರಶ್ನೆಗಳೆದ್ದವು. ಇನ್ನು ನನ್ನ ಮಟ್ಟಿಗಾದರೂ